ನಿಂತಿತ್ತು. ಇಡೀ ನಿಸರ್ಗ ರಮಣೀಯವಾಗಿತ್ತು. ಸಕಲೆಂಟು ಜೀವರಾಶಿಗಳು ನೆಮ್ಮದಿಯಾಗಿ ಜೀವನ ಸಾಗಿಸುತ್ತಿದ್ದವು. ರಾಜನ ಶ್ರಮವನ್ನು ಕಂಡ ರೈತರು ಖುಷಿಪಟ್ಟು ತಾವೂ ತಮ್ಮ ಹೊಲಗದ್ದೆಗಳಲ್ಲಿ ಶ್ರದ್ಧೆಯಿಂದ ದುಡಿದರು. ರಾಜ್ಯ ಮಳೆ ಬೆಳೆಗಳಿಂದ ಸಮೃದ್ಧವಾಯಿತು. ಆದರೂ ಒಂದು ಹುಣ್ಣು ವಾಸಿಯಾಗಲಿಲ್ಲವಲ್ಲ ಎಂಬುದು ರಾಜನ ದುಃಖಕ್ಕೆ ಕಾರಣವಾಗಿತ್ತು.

ರಾಜ್ಯ ಸಮೃದ್ಧಿಯಾಗಿರುವುದನ್ನು ಮನಗಂಡ ಮಂತ್ರಿ ರಾಜನನ್ನು ಮತ್ತೆ ಅರಮನೆಗೆ ಆಹ್ವಾನಿಸಲು ಬಂದ. ಮಂತ್ರಿಯನ್ನು ನೋಡಿ ರಾಜನಿಗೆ ತನ್ನ ಅರಮನೆಯ ಮತ್ತು ಪಟ್ಟಣದ ನೆನಪಾಯಿತು. ಹಿಂತಿರುಗಿ ಬರುವಂತೆ ಮಂತ್ರಿ ರಾಜನಲ್ಲಿ ವಿನಂತಿಸಿದ. ರಾಜನಿಗೆ ಗೊಂದಲವಾಯಿತು. ಇಲ್ಲಿಯವರೆಗೆ ಅವನು ಮಾಡಿದ್ದ ಬೇಸಾಯ ಅವನಿಗೆ ತೃಪ್ತಿ ನೀಡಿತ್ತು. ಮನಸ್ಸಿಗೆ ನೆಮ್ಮದಿಯನ್ನು ಕೊಟ್ಟಿತು. ಮರಗಿಡಗಳ ಒಡನಾಟ ಅವನನ್ನು ಆರೋಗ್ಯವಾಗಿಟ್ಟಿತ್ತು. ಆರೋಗ್ಯ ಭಾಗ್ಯಕ್ಕಿಂತ ಬೇರೆ ಭಾಗ್ಯವಿಲ್ಲ ಎಂಬುದು ಮನದಟ್ಟಾಗಿತ್ತು. ಆದರೂ ಒಂದು ಕಾಲದಲ್ಲಿ ಅವನು ಅನುಭವಿಸಿದ್ದ ಅರಮನೆಯ ಸುಖದ ಆಸೆ ಇನ್ನೂ ಒಂದಿಷ್ಟು ಉಳಿದಿತ್ತು. ಮಂತ್ರಿಯ ಮಾತಿಗೆ ತಕ್ಷಣ ಉತ್ತರ ಕೊಡದೆ, ತನ್ನ ರಾಣಿಯರ ಅಭಿಪ್ರಾಯ ಕೇಳಲು ತೀರ್ಮಾನಿಸಿದ. ಅವನ ಅಪ್ಪಣೆಯಂತೆ ಎಲ್ಲ ರಾಣಿಯರೂ ಬಂದು ರಾಜನ ಸಮ್ಮುಖದಲ್ಲಿ ಕುಂತರು. ರಾಜ ಅರಮನೆಗೆ ಹಿಂತಿರುಗುವುದೋ ಇಲ್ಲ ರೈತರಾಗಿ ಇಲ್ಲೇ ಇರುವುದೋ ಎಂದು ರಾಣಿಯರನ್ನು ಕೇಳಿದ. ಎಲ್ಲರೂ ಒಂದು ಕ್ಷಣ ಮೌನವಾದರು. ಆಗ ಹಿರಿಯ ರಾಣಿ, 'ನಮಗೆ ಯಾರಿಗೂ ಚಿನ್ನದ ಭಾಗ್ಯ ಬೇಡ, ಅನ್ನದ ಭಾಗ್ಯ ಸಾಕು' ಎಂದು ಚುಟುಕಾಗಿ ಹೇಳಿದಳು. ಮತ್ತೊಬ್ಬ ರಾಣಿ, 'ಈ ಭೂಮಿ ಇರುವುದು ಕೇವಲ ರಾಜನಿಗಲ್ಲ, ಭೂಮಿ ಮೇಲಿರುವ ಎಲ್ಲ ಜೀವಗಳಿಗೆ, ಇನ್ನು ಮುಂದೆ ನಾವು ದೇವರು ಸೃಷ್ಟಿಸಿದ ಎಲ್ಲ ಜೀವಗಳ ಜೊತೆ ಇರೋದೇ ಸರಿ' ಎಂದು ಅನುಭವದ ಮಾತುಗಳನ್ನು ಹೇಳಿದಳು. ರಾಜನಿಗೆ ಈಗ ಸಂಪೂರ್ಣ ಜ್ಞಾನೋದಯವಾಯಿತು. ತಾನು ಮತ್ತೆ ಅರಮನೆಗೆ ಬರುವುದಿಲ್ಲ ಎಂದು ಖಡಾಖಂಡಿತವಾಗಿ ತಿಳಿಸಿದ. ಆ ಮಾತು ರಾಜನ ಬಾಯಿಂದ ಹೊರಬರುತ್ತಿದ್ದಂತೆ ಅವನ ಬೆನ್ನಿನ ಏಳನೇ ಗಾಯವೂ ಸಂಪೂರ್ಣ ವಾಸಿಯಾಯಿತು. ಇವರೆಲ್ಲರ ಅಭಿಪ್ರಾಯವನ್ನು ಕೇಳಿದ ಮಂತ್ರಿಗೂ ಜ್ಞಾನೋದಯವಾಗಿ ತಾನೂ ತನ್ನ ಸಂಸಾರದೊಡನೆ ವನಾಂತರಕ್ಕೆ ಬಂದು ನೆಲೆಸುವುದಾಗಿ ಘೋಷಿಸಿದ. ರಾಜಪರಿವಾರದವರು ಸಾಮಾನ್ಯರಂತೆ ಜೀವನ ನಡೆಸುತ್ತಾ ಸಂತೋಷವಾಗಿ ಇದ್ದರು.


### ಹಿ.ಚಿ. ಬೋರಲಿಂಗಯ್ಯ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರಾಗಿ, ಲಲಿತಕಲಾ ನಿಕಾಯ ಮತ್ತು ಸಮಾಜ ವಿಜ್ಞಾನಗಳ ನಿಕಾಯದ ಡೀನ್ ಆಗಿ ಅಪಾರ ಆಡಳಿತಾತ್ಮಕ ಅನುಭವ ಇರುವ ಬೋರಲಿಂಗಯ್ಯ ಜಾನಪದ ವಿದ್ವಾಂಸರಾಗಿ ಮಹತ್ವದ ಕೆಲಸಗಳನ್ನು ಮಾಡಿದ್ದಾರೆ. 25ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಅವರು ಇಟಲಿ, ಫ್ರಾನ್ಸ್, ಹಾಲೆಂಡ್ ಮತ್ತು ಇರಾನ್‌ನ ರಾಜಧಾನಿ ಟೆಹರಾನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಗೊಂಬೆಯಾಟ ಉತ್ಸವಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಬೋರಲಿಂಗಯ್ಯ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹಿತ್ತಲಪುರ ಗ್ರಾಮದವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.